



# ಗುರುದೇವ

ಇಂದು ರವಿತಾರೆ ಹಿಮಗಿರಿ ಗಂಗೆ ಗೋದಾ ಸಿಂಧು ಶುಭ ಜಲ ನಿಧಿಗಳೆಲ್ಲವು
ಚಂದದಲಿ ಮೆರೆವನ್ನೆಗಂ ಬಂದ "ಶ್ರೀ ಗುರುದೇವ" ಪೊರೆಯಲಿ ಶಿಷ್ಯ ಬಳಗವನು

ಧಾರ್ಮಿಕ ಮಾಸಿಕ ಪತ್ರಿಕೆ

ಶ್ರೀ ಹೊಂಬುಜ ಅತಿಶಯ ಮಹಾಕ್ಷೇತ್ರ ಶ್ರೀ ವೀರನಿರ್ವಾಣ ಶಕವರ್ಷ 2551/ಶ್ರೀ ಕ್ರೋಧಿ ನಾಮ ಸಂವತ್ಸರ
**15-12-2024 ಮಾರ್ಗಶಿರ ಮಾಸ : ಶುಕ್ಲ ಪಕ್ಷ ಭಾನುವಾರ**

ಪುಟ : ೪ ಸಂಪುಟ : ೭೦ ಸಂಚಿಕೆ : ೧೨

RNI No. 13248/57-POSTEL REGD No. KA/SK/SMG 198/2024-26

ಪರಮ ಸಂರಕ್ಷಕರು, ಸ್ವಾಮಿತ್ವ, ಪ್ರಧಾನ ಸಂಪಾದಕರು : ಜಗದ್ಗುರು ಸ್ವಸ್ತಿಶ್ರೀ ದೇವೇಂದ್ರಕೀರ್ತಿ ಭಟ್ಟಾರಕ ಮಹಾಸ್ವಾಮೀಜಿಗಳವರು, ಶ್ರೀಕ್ಷೇತ್ರ ಹೊಂಬುಜ


ಶ್ರೀ ಕ್ಷೇತ್ರ ಹೊಂಬುಜ



ಭಗವಾನ್ ಶ್ರೀ ಪಾರ್ಶ್ವನಾಥ ಸ್ವಾಮಿ





ಜಗನ್ಮಾತೆ ಶ್ರೀ ಪದ್ಮಾವತಿ ದೇವಿ

ಪರಮಪೂಜ್ಯ ಜಗದ್ಗುರು ಸ್ವಸ್ತಿಶ್ರೀ

## ದೇವೇಂದ್ರಕೀರ್ತಿ ಭಟ್ಟಾರಕ ಪಟ್ಟಾಚಾರ್ಯವರ್ಯ ಮಹಾಸ್ವಾಮಿಗಳವರು

ಶುಭಾಶೀರ್ವಚನ — ಶ್ರೀ ಕ್ಷೇತ್ರ ಹೊಂಬುಜ

## 'ಗೆಲುವಿನ ರಹಸ್ಯ'

ಜೀವನದಲ್ಲಿ ಒಬ್ಬ ವ್ಯಕ್ತಿಯು ಸಫಲತೆ (ಗೆಲುವು) ಯನ್ನು ಹೊಂದಲು ಅವಿರತ ಪ್ರಯತ್ನ ಮಾಡುತ್ತಾನೆ. ಬದುಕಿನಲ್ಲಿ ಸುಖ ಮತ್ತು ಸಮೃದ್ಧಿಯ ಅನುಭವ ಯಶಸ್ಸು ನೀಡುವುದೆಂದು ತಿಳಿದಿರುತ್ತಾನೆ. ಸಫಲತೆಯಿಂದ ಆನಂದವನ್ನು ಹೊಂದುವುದು ಸುಲಭದ ಮಾತಲ್ಲ. ಅದಕ್ಕಾಗಿ ಪರಿಶ್ರಮ, ಸಮರ್ಪಣೆ ಹಾಗೂ ಆತ್ಮ-ವಿಶ್ವಾಸಗಳ ಜೊತೆಗೆ ತನ್ನಲ್ಲಿರುವ ಒಳ್ಳೆತನವನ್ನು ಅರಿತು ಸರಿಯಾದ ರೀತಿಯಲ್ಲಿ ಅನುಸರಿಸಿದರೆ ಮಾತ್ರ ಗುರಿ ಮುಟ್ಟಲು ಸಾಧ್ಯ. ಈ ಗೂಢ ರಹಸ್ಯವರಿತು ಮುಂದೆ ಸಾಗುವುದು ಎಲ್ಲರಿಗೂ ಕಷ್ಟ ಸಾಧ್ಯ. ಯಶಸ್ಸಿನ ಹಾದಿಯಲ್ಲಿ ನಡೆಯುವ ವ್ಯಕ್ತಿಗೆ ಕೆಲವೊಂದು ಪ್ರಯತ್ನಗಳನ್ನು ಸುಭಾಷಿತಕಾರರು ಕೆಳಕಂಡಂತೆ ಹೇಳಿರುತ್ತಾರೆ.

WWW.HOMBUJAPADMAVATI.ORG

**ಉದ್ಯೋಗಿನಂ ಪುರುಷಸಿಂಹಮುಪೈತಿಲಕ್ಷ್ಮೀ**
**ದೈವಂ ಹಿ ದೈವಮಿತಿ ಕಾಪುರುಷಾಂ ವದಂತಿ।**
**ದೈವಂ ನಿಹತ್ಯ ಕುರು ಪೌರುಷಂ ಆತ್ಮಶಕ್ತ್ಯಾ**
**ಯತ್ನೆ ಕೃತೆ ಯದಿ ನ ಸಿದ್ಧ್ಯತಿ ನ ಕೋತ್ರ ದೋಷಃ॥**

ಅಂದರೆ ಪರಿಶ್ರಮ ಪಡುವ ಮತ್ತು ಸಾಹಸ ಮಾಡುವ ವ್ಯಕ್ತಿಗೆ ಲಕ್ಷ್ಮಿ (ಧನ) ಪ್ರಾಪ್ತವಾಗಿರುತ್ತದೆ. ಆಲಸ್ಯವಂತರು (ಉದಾಸೀನ) ಭಾಗ್ಯದಲ್ಲಿ ಇದ್ದ ಹಾಗೇ ಆಗುತ್ತದೆ ಎಂಬ ಭರವಸೆಯಲ್ಲಿರುತ್ತಾರೆ. ಭಾಗ್ಯ ಅದೃಷ್ಟದ ಮೇಲೆ ನಂಬಿಕೆಯಿಡುವುದಕ್ಕಿಂತ ತನ್ನ ಪರಿಶ್ರಮ ಮತ್ತು ಯೋಗ್ಯತೆಯ ಜೊತೆಗೆ ಪ್ರಯತ್ನಪಟ್ಟರೆ ಯಶಸ್ಸು (ಗೆಲುವು) ಸಿಗುತ್ತದೆ. ಒಂದು ವೇಳೆ ಪ್ರಯುತ್ನಪಟ್ಟ ಮೇಲೂ ಯಶಸ್ಸು ಸಿಗದೇ ಇದ್ದರೆ ಯಾವುದೇ ದೋಷ ವ್ಯಕ್ತಿಯದಲ್ಲವಾಗಿರುತ್ತದೆ.

ಒಮ್ಮೆ ಒಬ್ಬ ಯುವಕ ಆ ಊರಿನ ಬುದ್ಧಿವಂತ ವ್ಯಕ್ತಿಯ ಬಳಿ ಜೀವನದಲ್ಲಿ ಯಶಸ್ಸು ಗಳಿಸುವ ರಹಸ್ಯವನ್ನು ಹೇಳಿಕೊಡಿ ಎಂದು ಕೇಳಿಕೊಳ್ಳುತ್ತಾನೆ. ಅದಕ್ಕೆ ಆ ವ್ಯಕ್ತಿ ಮರುದಿವಸ ಸಂಜೆ ವೇಳೆ ಒಂದು ನದಿ ತೀರಕ್ಕೆ ಬರಲು ತಿಳಿಸುತ್ತಾನೆ. ಅಂತೆಯೇ ಆ ಯುವಕನು ಬೆಳಗಾಗಿ ಸಂಜೆಯಾಗುವುದನ್ನೇ ಕಾಯ್ದು ಸಂಜೆ ವೇಳೆ ನದಿ ತೀರಕ್ಕೆ ಆ ವ್ಯಕ್ತಿಯಿರುವ ಬಳಿ ಬರುತ್ತಾನೆ. ಕೂಡಲೇ ಆ ವ್ಯಕ್ತಿಯು ಯುವಕನನ್ನು ನದಿಯೊಳಗೆ ಕೈ ಹಿಡಿದು ಕರೆದುಕೊಂಡು ಹೋಗುತ್ತಾನೆ. ನಿಧಾನವಾಗಿ ನದಿ ಮಧ್ಯೆ ಆತನನ್ನು ನೀರಿನಲ್ಲಿ ಮುಳುಗಿಸಲು ಪ್ರಯತ್ನಿಸುತ್ತಾನೆ. ಯುವಕನು ಗಾಬರಿಯಿಂದ ಏನಾಗುತ್ತಿದೆ ಎಂದು ಅರಿಯುವ ಮೊದಲೇ ಜೋರಾಗಿ ಆ ವ್ಯಕ್ತಿಯು ಯುವಕನನ್ನು ನೀರಿನಲ್ಲಿ ಮುಳುಗಿಸುತ್ತಾನೆ. ಯುವಕನು ಶಕ್ತಿ ಮೀರಿ ತಪ್ಪಿಸಿಕೊಳ್ಳಲು ಪ್ರಯತ್ನಿಸಿದರೂ ಉಸಿರು ಕಟ್ಟುವ ಸ್ಥಿತಿಯಲ್ಲಿ ಆ ವ್ಯಕ್ತಿಯು ಆತನನ್ನು ನೀರಿನಿಂದ ಹೊರ ತೆಗೆಯುತ್ತಾನೆ. ಯುವಕನು ಗಾಬರಿಯಿಂದ ನದಿ ದಡಕ್ಕೆ ಆತನಿಂದ ತಪ್ಪಿಸಿಕೊಂಡು ಬರುತ್ತಾನೆ.

ಆ ವ್ಯಕ್ತಿಯು ಯುವಕನ ಬಳಿ ಬರುವುದನ್ನು ಕಂಡು "ಯಾಕೆ ನನಗೆ ನೀವು ಹೀಗೆ ಮೋಸ ಮಾಡಿದಿರಿ" ಎಂದು ಕೇಳುತ್ತಾನೆ. ಅದಕ್ಕೆ ಆ ವ್ಯಕ್ತಿಯು "ನೀನು ನೀರಿನಲ್ಲಿ ಮುಳುಗುವಾಗ ನಿನ್ನ ಮನಸ್ಸಲ್ಲಿ ಏನು ಆವರಿಸಿತ್ತು ಅಥವಾ ಹೇಗೆ ಅನಿಸಿತು ಎಂದು ಕೇಳುತ್ತಾನೆ. ಅದಕ್ಕೆ ಯುವಕನು "ನಾನು ನೀರಿನಲ್ಲಿ ಹೇಗಾದರೂ ಮುಳುಗುತ್ತಿರಲು ನಾನು ಉಸಿರು ಹಿಡಿದು ಹೊರಗೆ ಬರಬೇಕೆಂಬ ವಿಚಾರವಷ್ಟೆ ಬರುತ್ತಿತ್ತು. ಮತ್ತೇನು ತಲೆಯಲ್ಲಿ ಇರಲಿಲ್ಲ ಎಂದೇಳುತ್ತಾನೆ.

ಆ ವ್ಯಕ್ತಿಯು "ಇದೇ ಜೀವನದಲ್ಲಿ ನಿನ್ನ ಗೆಲುವಿನ ಅಥವಾ ಸಫಲತೆಯ ಸೂಚಕವಾಗಿದೆ. ಯಾವಾಗ ನೀನು ಏನಾದರೂ ಒಂದು ಗುರಿಯನ್ನು ತಲುಪಲು ಹಂಬಲಿಸುವೆಯೋ ಅದೇ ನಿನ್ನ ಗೆಲುವನ್ನು ದೊರಕಿಸಿಕೊಡುತ್ತದೆ" ಎಂದು ಬುದ್ಧಿ ಹೇಳಿ ಮುಂದೆ ಹೋದರು.

**ಸಹೃದಯರೇ,**

ನಾವುಗಳು ಪ್ರತಿದಿನ ನಮ್ಮ ಗುರಿಯೆಡೆಗೆ ಗಮನವಿಟ್ಟು ನಡೆದಾಗಲೇ ಗೆಲುವು ಸಿಗುವುದು. ನಮ್ಮ ಆತ್ಮ ವಿಶ್ವಾಸದ ಜೊತೆಗೆ ಮಾಡುವ ಪ್ರಯತ್ನ (ಪುರುಷಾರ್ಥ)ವೇ ನಮ್ಮ ಫಲಿತಾಂಶ ಕೊಡಬಲ್ಲದು. ಮತ್ತೊಂದು ಕ್ಯಾಲೆಂಡರ ಬದಲಾಗುತ್ತಿದೆ. ನಮ್ಮ ಗುರಿ ಮಾತ್ರ ಅಚಲವಾಗಿರಲಿ.

**2025ನೇ ಹೊಸ ವರುಷದ ಶುಭಾಶಯಗಳು**

## ಧರ್ಮಜ್ಞಾನ ಪ್ರಸಾರಕ ಕರ್ಮಯೋಗಿ ಸ್ವಸ್ತಿಶ್ರೀ ಚಾರುಕೀರ್ತಿ ಭಟ್ಟಾರಕ ಶ್ರೀಗಳ ನಿಷಿಧಿ ಮಂಟಪ ಲೋಕಾರ್ಪಣೆ

## "ಚಾರುಕೀರ್ತಿ ಭಟ್ಟಾರಕ ಶ್ರೀಗಳ ದೂರದರ್ಶಿತ್ವ-ದೂರದೃಷ್ಟಿ ಮಹತ್ವದ್ದು"

-ಡಾ. ಡಿ. ವೀರೇಂದ್ರ ಹೆಗ್ಗಡೆ



ಶ್ರವಣಬೆಳಗೊಳ : ಭಾರತೀಯ ಸಾಂಸ್ಕೃತಿಕ-ಸಂಸ್ಕಾರದ ಪರಂಪರೆಯಲ್ಲಿ ಕರ್ಮಯೋಗಿ ಸ್ವಸ್ತಿಶ್ರೀ ಚಾರುಕೀರ್ತಿ ಭಟ್ಟಾರಕ ಮಹಾಸ್ವಾಮಿಗಳ ದೂರದರ್ಶಿತ್ವ ಹಾಗೂ ದೂರದೃಷ್ಟಿ ಇತಿಹಾಸ ಪರಂಪರೆಯಲ್ಲಿ ಮಹತ್ವದ ಮೈಲುಗಲ್ಲುಗಳಾಗಿವೆ ಎಂದು ಡಾ. ಡಿ. ವೀರೇಂದ್ರ ಹೆಗ್ಗಡೆಯವರು ಡಿ. 06ರಂದು ಸ್ವಸ್ತಿಶ್ರೀ ಚಾರುಕೀರ್ತಿ ಭಟ್ಟಾರಕ ಮಹಾಸ್ವಾಮಿಗಳ ನಿಷಿಧಿ ಮಂಟಪ ಲೋಕಾರ್ಪಣೆ ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿ ಮಾತನಾಡಿದರು. ಗೋಮಟೇಶ್ವರರು ವಿಶ್ವಕ್ಕೆ ಶಾಂತಿ ಬಯಸಿ, ತ್ಯಾಗ ಮೂರ್ತಿಗಳಾಗಿದ್ದರು. ಇದರ ಪ್ರತಿರೂಪವಾಗಿ ಸ್ವಸ್ತಿಶ್ರೀ ಚಾರುಕೀರ್ತಿ

2ನೇ ಪುಟಕ್ಕೆ

## ಕುಂದಾದ್ರಿ ವಾರ್ಷಿಕ ಜಾತ್ರಾ ಮಹೋತ್ಸವ

ಪ್ರತಿ ವರ್ಷದಂತೆ ಈ ವರ್ಷವೂ ಜನವರಿ 14, 2025ರ ಮಂಗಳವಾರದಂದು ಅತಿಶಯ ಶ್ರೀಕ್ಷೇತ್ರ ಹೊಂಬುಜ ಜೈನ ಮಠದ ಅಧೀನ ಕ್ಷೇತ್ರವಾಗಿರುವ ಕುಂದಾದ್ರಿ ಕ್ಷೇತ್ರದಲ್ಲಿ ವಾರ್ಷಿಕ ಪೂಜಾ ಮಹೋತ್ಸವವು ನೆರವೇರಲಿದೆ. ಅಂದು ಭಗವಾನ್ ಶ್ರೀ ಪಾರ್ಶ್ವನಾಥ ಸ್ವಾಮಿಗೆ ನವಕಳಶಾಭಿಷೇಕ, ವಿಶೇಷ ಪೂಜೆ, ಶ್ರೀ ಪದ್ಮಾವತಿ ದೇವಿ ಷೋಡಶೋಪಚಾರ ಪೂಜೆ ಹಾಗೂ ಆಚಾರ್ಯ ಕುಂದಕುಂದರ ಪಾದಚರಣಗಳಿಗೆ ಪಾದಪೂಜೆ ಏರ್ಪಡಿಸಲಾಗಿದೆ. ಬೆಳ್ಳಿಗ್ಗೆ 8 ರಿಂದ ಪೂಜಾ ವಿಧಾನಗಳು ಆರಂಭಗೊಳ್ಳಲಿದೆ. ಪರಮಪೂಜ್ಯ ಜಗದ್ಗುರು ಸ್ವಸ್ತಿಶ್ರೀ ಡಾ. ದೇವೇಂದ್ರಕೀರ್ತಿ ಭಟ್ಟಾರಕ ಮಹಾಸ್ವಾಮೀಜಿಗಳವರ ದಿವ್ಯ ಸಾನಿಧ್ಯ, ನೇತೃತ್ವ ಮತ್ತು ಮಾರ್ಗದರ್ಶನದಲ್ಲಿ ಮಕರ ಸಂಕ್ರಾಂತಿಯ ಶುಭದಿನದಂದು ಕುಂದಾದ್ರಿ ಶ್ರೀಕ್ಷೇತ್ರದಲ್ಲಿ ಧಾರ್ಮಿಕ ವಿಧಿ-ವಿಧಾನಗಳು ನೆರವೇರಲಿವೆ. ಈ ಧಾರ್ಮಿಕ ವಿಧಿ-ವಿಧಾನಗಳಲ್ಲಿ ಭಕ್ತಬಾಂಧವರು ಭಾಗವಹಿಸುವಂತೆ ಅಪೇಕ್ಷಿಸಲಾಗಿದೆ. ಹೆಚ್ಚಿನ ಮಾಹಿತಿಗಾಗಿ ಸಂಪರ್ಕ : ಫೋ: 08185-262722, ಮೊ: 9480543875. 9482781142, 8762546387.

ಆಡಳಿತಾಧಿಕಾರಿ, ಶ್ರೀ ಹೊಂಬುಜ ಜೈನ ಮಠ




## ಶ್ರೀ ಪದ್ಮಾಂಬಾ ಜೈನ ದಿನದರ್ಶಿಕೆ-2025 ಬಿಡುಗಡೆ-ಮಾರಾಟಕ್ಕೆ ಲಭ್ಯ

ಅತಿಶಯ ಶ್ರೀಕ್ಷೇತ್ರ ಹೊಂಬುಜದಿಂದ ಕನ್ನಡ ಭಾಷೆಯಲ್ಲಿ ಪ್ರಕಟಿಸಲ್ಪಡುವ ಶ್ರೀ ಪದ್ಮಾಂಬಾ ಜೈನ ದಿನದರ್ಶಿಕೆ-2025 ನ. 20ರ ಲಕ್ಷದೀಪೋತ್ಸವದಂದು ಸ್ವಸ್ತಿಶ್ರೀಗಳವರು ಬಿಡುಗಡೆಗೊಳಿಸಿದರು. ಪ್ರತಿಯೊಂದು ದಿನದ ಧಾರ್ಮಿಕ ಮಹತ್ವವನ್ನು ಆಚರಿಸುವುದು ಪ್ರತಿಯೋರ್ವರ ಧರ್ಮ ಮತ್ತು ಕರ್ತವ್ಯ ಎಂದು ಶುಭ ಹಾರೈಸಿದರು. ಪ್ರಕಟಗೊಂಡಿರುವ "ಶ್ರೀ ಪದ್ಮಾಂಬಾ ಜೈನ ದಿನದರ್ಶಿಕೆ" ಶ್ರೀಕ್ಷೇತ್ರದಲ್ಲಿ ಲಭ್ಯವಿದೆ. ದಿನದರ್ಶಿಕೆಯ ಬೆಲೆ 50/- ಅಂಚೆಯ ಮೂಲಕ ಪಡೆಯಲಿಚ್ಛಿಸುವವರು ಅಂಚೆ ವೆಚ್ಚ ಸೇರಿ ರೂ. 80/-ಶ್ರೀಮಠದ ವಿಳಾಸಕ್ಕೆ ಕಳುಹಿಸಿದಲ್ಲಿ ಅಂಚೆ ಮೂಲಕ ಕಳುಹಿಸಲಾಗುವುದು

## "ಚಾರುಕೀರ್ತಿ ಭಟ್ಟಾರಕ ಶ್ರೀಗಳ ದೂರದರ್ಶಿತ್ವ-ದೂರದೃಷ್ಟಿ ಮಹತ್ವದ್ದು"

1ನೇ ಪುಟದಿಂದ

ಭಟ್ಟಾರಕ ಶ್ರೀಗಳು ತ್ಯಾಗ ಮೂರ್ತಿಗಳಾಗಿದ್ದರು. ಉತ್ತರದಲ್ಲಿ ಎಷ್ಟೇ ವಿಗ್ರಹಗಳು ಸ್ಥಾಪನೆಯಾದರೂ ಶ್ರೀಕ್ಷೇತ್ರದ ಬಾಹುಬಲಿಯ ಎತ್ತರ, ಇತಿಹಾಸ ಮುರಿಯಲು ಸಾಧ್ಯವಿಲ್ಲ. ಜನರ ವಿಶ್ವಾಸ ದೊಡ್ಡದಿದ್ದು, ನಿಷಿಧಿಗೆ ಇತಿಹಾಸವಿದೆ ಎಂದರು.

ಪೂಜ್ಯರ ಮಾರ್ಗದರ್ಶನದಿಂದ ನಾಲ್ಕು ಮಹಾಮಸ್ತಕಾಭಿಷೇಕಗಳನ್ನು ಕಂಡಿದ್ದು, ಅವರು ತ್ಯಾಗ ಜೀವನದಿಂದ ಸನ್ಯಾಸತ್ವ ಶಿಕ್ಷಣ ನೀಡಿ, ಪಟ್ಟಾಭಿಷೇಕ ಮಾಡಿ ಹಲವಾರು ಭಟ್ಟಾರಕರುಗಳನ್ನು ನಾಡಿಗೆ ನೀಡಿದ್ದಾರೆ. ಇವರೊಬ್ಬ ಸಮಾಜಕ್ಕೆ ಮಾರ್ಗದರ್ಶನ ನೀಡಿದ ಮಹಾತ್ಮ. ಇವರು ದೂರ ದರ್ಶಿತ್ವ, ದೂರದೃಷ್ಟಿಗಳು ಸಮಾಜಕ್ಕೆ ಮಹತ್ವದ ಮೈಲುಗಲ್ಲಿಗಳಾಗಿವೆ ಎಂದರು. ಪರಮಪೂಜ್ಯ ಚಾರುಕೀರ್ತಿ ಭಟ್ಟಾರಕ ಸ್ವಾಮೀಜಿಯವರು ಯೋಗದ ರೀತಿ ಕರ್ಮ ಮಾಡಿ ಕರ್ಮಯೋಗಿ ಎನಿಸಿಕೊಂಡಿದ್ದವರು ಎಂದು ಶ್ರೀ ಆದಿಚುಂಚನಗಿರಿ ಮಹಾಸಂಸ್ಥಾನ ಮಠದ ಪರಮಪೂಜ್ಯ ಡಾ. ನಿರ್ಮಲಾನಂದನಾಥ ಸ್ವಾಮೀಜಿ ಗುಣಗಾನ ಮಾಡಿದರು.

ಗೊಮ್ಮಟೇಶ್ವರನ ಎತ್ತರಕ್ಕೆ ಶ್ರವಣಬೆಳಗೊಳದ ಕೀರ್ತಿಯನ್ನು ಪಸರಿಸಿದವರು ಚಾರುಶ್ರೀಗಳು. ಆಕಾಶಕ್ಕೆ ಆಕಾಶವೇ ಹೋಲಿಕೆ, ಸಮುದ್ರಕ್ಕೆ ಸಮುದ್ರವೇ ಹೋಲಿಕೆ. ಅದರಂತೆ ಚಾರುಶ್ರೀಗಳಿಗೆ ಅವರೇ ಸರಿಸಾಟಿ. ಎಲ್ಲರನ್ನು ಪ್ರೀತಿಸುವ ಗುಣ ಅವರದ್ದು. ಪ್ರಾಕೃತ ಭಾಷೆ ಉಳಿಸುವಲ್ಲಿ ಶ್ರಮಿಸಿದ್ದಾರೆ ಎಂದು ತುಮಕೂರಿನ ಸಿದ್ದಗಂಗಾ ಮಠದ ಪರಮಪೂಜ್ಯ ಶ್ರೀ ಸಿದ್ಧಲಿಂಗ ಶ್ರೀಗಳವರು ತಿಳಿಸಿದರು.

ಉಡುಪಿ ಪೇಜಾವರ ಶ್ರೀ ವಿಶ್ವಪ್ರಸನ್ನತೀರ್ಥ ಸ್ವಾಮೀಜಿ ಮಾತನಾಡಿ, ಸಮಾಜದ ಉದ್ಧಾರಕ್ಕೆ ಅವರು ಮಾಡಿದ ಸೇವೆ ಅನನ್ಯ. ಯಾರಿಗೂ ಹಿಂಸೆಯಾಗದ ರೀತಿ ಬದುಕು ಸಾಗಿಸಿದರೆ ಅದೇ ಶ್ರೇಷ್ಠ ಎಂದರು.

ಅರಿಹಂತಗಿರಿ, ಕನಕಗಿರಿ, ಕಾರ್ಕಳ, ಹೊಂಬುಜ, ಸಿಂಹನಗದ್ದೆ, ಸೋಂದ, ಎನ್.ಆರ್.ಪುರ, ಕಂಬದಹಳ್ಳಿ, ಅರತಿಪುರ, ವರೂರು, ಕೊಲ್ಲಾಪುರ, ನಾಂದಣಿ ಜೈನ ಮಠಗಳ ಭಟ್ಟಾರಕ ಶ್ರೀಗಳು ಪಾವನ ಸಾನಿಧ್ಯ ವಹಿಸಿ ಆಶೀರ್ವಚನ ನೀಡಿದರು. ಕಾರ್ಯಕ್ರಮದಲ್ಲಿ ಭಾರತೀಯ ಜೈನ್ ಮಿಲನ ರಾಷ್ಟ್ರೀಯ ಕಾರ್ಯಾಧ್ಯಕ್ಷ ಧರ್ಮಸ್ಥಳ ಸುರೇಂದ್ರ ಕುಮಾರ್ ಉಪಸ್ಥಿತರಿದ್ದರು.


ಮಾಜಿ ಮುಖ್ಯಮಂತ್ರಿ ಎಂ. ವೀರಪ್ಪಮೊಯ್ಲಿ ಶ್ರೀಗಳವರ ಹೆಸರಿನಲ್ಲಿ ಕವನವಾಚಿಸಿ ಭಕ್ತಿ ಮೆರೆದರು. ರಾಜ್ಯ ಸಚಿವ ಡಿ. ಸುಧಾಕರ, ಸಹಕಾರ ಹಾಗೂ ಜಿಲ್ಲಾ ಉಸ್ತುವಾರಿ ಸಚಿವ ಕೆ.ಎನ್.ರಾಜಣ್ಣ, ಶಾಸಕ ಸಿ.ಎಂ. ಬಾಲಕೃಷ್ಣ, ಸಂಸದ ಶ್ರೇಯಸ್ ಪಾಟೀಲ್, ಶಾಸಕ ಅಭಯ ಪಾಟೀಲ್ ಮಾತನಾಡಿದರು. ಮಾಜಿ ಸಚಿವ ಅಭಯಚಂದ್ರ ಜೈನ್, ವೀರಕುಮಾರ್ ಪಾಟೀಲ್, ಮಾಜಿ ಶಾಸಕ ಗೋಪಾಲಸ್ವಾಮಿ, ಸಂಜಯ್ ಪಾಟೀಲ್ ಇನ್ನಿತರರು ಭಾಗವಹಿಸಿದ್ದರು. ಲಲಿತಾ ಜೈನ್ ಕ್ಷೇತ್ರದ ಬಗ್ಗೆ ವರದಿ ಮಂಡಿಸಿದರು. ಅಂದು ಹತ್ತು ಸಾವಿರ ಉತ್ತಮ ಮಾವಿನ ತಳಿಗಳ ಗಿಡಗಳನ್ನು ವಿತರಿಸುವ ಅರ್ಥಪೂರ್ಣ ಕಾರ್ಯಕ್ರಮವೂ ನಡೆಯಿತು.

ಶ್ರವಣಬೆಳಗೊಳದ ಪರಮಪೂಜ್ಯ ಜಗದ್ಗುರು ಸ್ವಸ್ತಿಶ್ರೀ ಚಾರುಕೀರ್ತಿ ಪಂಡಿತಾಚಾರ್ಯವರ್ಯ ಭಟ್ಟಾರಕ ಮಹಾಸ್ವಾಮೀಜಿಗಳವರು ಎಲ್ಲರನ್ನು ಸ್ವಾಗತಿಸಿದರು. ಚಿತ್ರ ಕಲಾವಿದ ಎಂ.ಎಂ. ಜಿನೇಂದ್ರ ಕೈಚಳಕದ ಚಾರುಕೀರ್ತಿ ಭಟ್ಟಾರಕ ಪಟ್ಟಾಚಾರ್ಯ ಶ್ರೀಗಳ ಕಂಚಿನ ಪ್ರತಿಮೆ ಜನರ ಗಮನ ಸೆಳೆಯಿತು. ಕುಮುದ ನಾಗಭೂಷಣ್ ಕಾರ್ಯಕ್ರಮ ನಿರೂಪಿಸಿದರು. ತಮ್ಮ ನಿತ್ಯ ಪೂಜೆ, ತಪ, ಧ್ಯಾನ, ಸ್ವಾಧ್ಯಾಯಗಳನ್ನು ಚಾಚೂತಪ್ಪದೇ ನಿರ್ವಹಿಸುತ್ತಾ ಸಹಸ್ರಾರು ಭಕ್ತರನ್ನು ಸ್ವಾಗತಿಸುವುದರಲ್ಲಿ ಸ್ವಾಮೀಜಿಯವರು ನಿರತರಾಗಿರುವುದನ್ನು ಕಂಡಾಗ ನಾವು 'ಕಿಂಚಿತ್ ಸೇವೆ ಮಾಡಲೇಬೇಕು' ಎಂದೆನಿಸುತ್ತಿತ್ತು ಎಂಬುದು ಭಕ್ತವೃಂದದವರು ಇಂದಿಗೂ ನೆನಪಿಸಿಕೊಳ್ಳುತ್ತಾರೆ.

WWW.HOMBUJAPADMAVATI.ORG

**ಕರ್ಮಯೋಗಿ ಸ್ವಸ್ತಿಶ್ರೀ ಚಾರುಕೀರ್ತಿ ಭಟ್ಟಾರಕ ಶ್ರೀಗಳ ನಿಷಿದಿ ಮಂಟಪ ಲೋಕಾರ್ಪಣೆಯ ಸಂದರ್ಭದಲ್ಲಿ 'ಭಟ್ಟಾರಕ ಪರಂಪರೆ' ಯ ಅಂಚೆ ಕಾರ್ಡ್, ಮುದ್ರೆಯನ್ನು ಲೋಕಾರ್ಪಣೆಗೊಳಿಸಲಾಯಿತು.**




ಜಿನ-ದನಿ ಸುದ್ಧವಜೋಗೇಣ ಪುಣೋ ಧರ್ಮಂ ಸುಕ್ಕಂ ಚ ಹೋದಿ ಜೀವಸ್ಸ ।
ತಮ್ಹಾ ಸಂವರಹೇದೋ ಝೋಣೋತ್ತಿ ವಿಚಿಂತವಣಿಜ್ಜಂ ॥

ಅರ್ಥ:- ಶುದ್ಧೋಪಯೋಗದಿಂದ ಜೀವನಿಗೆ ಧರ್ಮಧ್ಯಾನ ಶುಕ್ರಧ್ಯಾನ ಉಂಟಾಗುತ್ತದೆ. ಆದ್ಧರಿಂದ ಧರ್ಮಧ್ಯಾನ ಸಂವರಕ್ಕೆ ಕಾರಣವೆಂದು ತಿಳಿಯುವುದು

## ಬರಲಿರುವ ಪರ್ವದಿನಗಳು

ಕ್ರೋಧಿನಾಮ ಸಂವತ್ಸರದ

ಮಾರ್ಗಶಿರಮಾಸ ಕೃಷ್ಣಪಕ್ಷ ಅಷ್ಟಮಿಯಿಂದ ಪುಷ್ಯಮಾಸ ಶುಕ್ಲಪಕ್ಷ ಪಂಚಮಿಯವರೆಗೆ

| | |
|---|---|
| **ಮಾರ್ಗಶಿರ ಮಾಸ** | ಜ. 05 ಭಾನು-ಷಷ್ಠಿ-ಪೂ.ಭಾ. |
| ಡಿ. 23 ಸೋಮ-ಅಷ್ಟಮಿ-ಉತ್ತರ. | ಜ. 06 ಸೋಮ-ಸಪ್ತಮಿ-ಉ.ಭಾ. |
| ಡಿ. 24 ಮಂಗಳ-ನವಮಿ-ಹಸ್ತ | ಜ. 07 ಮಂಗಳ-ಅಷ್ಟಮಿ-ರೇವತಿ |
| ಡಿ. 25 ಬುಧ-ದಶಮಿ-ಚಿತ್ತ | ಜ. 08 ಬುಧ-ನವಮಿ-ಅಶ್ವಿನಿ |
| ಡಿ. 26 ಗುರು-ಏಕಾದಶಿ-ಸ್ವಾತಿ | ಜ. 09 ಗುರು-ದಶಮಿ-ಭರಣಿ |
| ಡಿ. 27 ಶುಕ್ರ-ದ್ವಾದಶಿ-ವಿಶಾಖ | ಜ. 10 ಶುಕ್ರ-ಏಕಾದಶಿ-ಕೃತ್ತಿಕಾ |
| ಡಿ. 28 ಶನಿ-ತ್ರಯೋದಶಿ-ಅನುರಾಧ | ಜ. 11 ಶನಿ-ದ್ವಾದಶಿ-ರೋಹಿಣಿ |
| ಡಿ. 29 ಭಾನು-ಚತುರ್ದಶಿ-ಜ್ಯೇಷ್ಠ | ಜ. 12 ಭಾನು-ತ್ರಯೋದಶಿ-ಚತುರ್ದಶಿ-ಮೃಗಶಿರಾ |
| ಡಿ. 30 ಸೋಮ-ಅಮವಾಸ್ಯೆ-ಮೂಲ | ಜ. 13 ಸೋಮ-ಹುಣ್ಣಿಮೆ-ಆರಿದ್ರಾ |
| **ಪುಷ್ಯ ಮಾಸ** | **ಜ. 14 ಮಂಗಳ-ಪ್ರತಿಪದ-ಪುನರ್ವಸು ಶ್ರೀಕ್ಷೇತ್ರ ಕುಂದಾದ್ರಿಯ ವಾರ್ಷಿಕ ಜಾತ್ರಾ ಮಹೋತ್ಸವ, ಶ್ರೀಗಳವರ ಸಾನಿಧ್ಯದಲ್ಲಿ.** |
| ಡಿ. 31 ಮಂಗಳ-ಪ್ರತಿಪದ-ಪೂ.ಷಾ. | ಜ. 15 ಬುಧ-ಬಿದಿಗೆ-ಪುಷ್ಯ |
| ಜ. 01 ಬುಧ-ಬಿದಿಗೆ-ಉ.ಷಾ. | |
| ಜ. 02 ಗುರು-ತದಿಗೆ-ಶ್ರವಣ | |
| ಜ. 03 ಶುಕ್ರ-ಚತುರ್ಥಿ-ಧನಿಷ್ಠಾ | |
| ಜ. 04 ಶನಿ-ಪಂಚಮಿ-ಶತಭಿಷಾ | |

### ಪಂಚನದಿಗಳ ಉಗಮಸ್ಥಾನ ಶ್ರೀ ಕುಮದ್ವತಿ ತೀರ್ಥದ ದೀಪೋತ್ಸವ

## "ಪ್ರಕೃತಿ ಅಮೃತ ಧಾರೆ ಕುಮದ್ವತಿ ತೀರ್ಥ: ದೀಪಾರಾಧನೆ ಸ್ಪರ್ಶ"

-ಪರಮಪೂಜ್ಯ ಸ್ವಸ್ತಿಶ್ರೀ ಡಾ. ದೇವೇಂದ್ರಕೀರ್ತಿ ಭಟ್ಟಾರಕ ಮಹಾಸ್ವಾಮೀಜಿ



ಹೊಂಬುಜ : **"ಪ್ರಾಚೀನ ತೀರ್ಥಕ್ಷೇತ್ರಗಳು ಪ್ರಕೃತಿ-ಪರಿಸರ ರಕ್ಷಣೆಯ ಸಂದೇಶ ಸಾರುವ ಐಹಿತ್ಯ ಹೊಂದಿವೆ. ನದಿಗಳ ಮೂಲವಾಗಿರುವ ಕುಮದ್ವತಿ ತೀರ್ಥವು ಪ್ರಕೃತಿಯ ಒಡಲಿನಿಂದ ಜಲಧಾರೆಯನ್ನು ಮಾನವ ಕುಲಕ್ಕೆ ಮತ್ತು ಪ್ರಾಣಿ ಪಕ್ಷಿಗಳಿಗೆ ನೀಡುವ ಅಪೂರ್ವ ತಾಣವಾಗಿದೆ"** ಎಂದು ಹೊಂಬುಜ ಅತಿಶಯ ಶ್ರೀಕ್ಷೇತ್ರ ಹೊಂಬುಜದ ಪೀಠಾಧಿಪತಿಗಳಾದ ಪರಮಪೂಜ್ಯ ಜಗದ್ಗುರು ಸ್ವಸ್ತಿಶ್ರೀ ಡಾ. ದೇವೇಂದ್ರಕೀರ್ತಿ ಭಟ್ಟಾರಕ ಮಹಾಸ್ವಾಮಿಗಳವರು ತಿಳಿಸಿದರು.

ಅವರು ಶ್ರೀಕ್ಷೇತ್ರದಲ್ಲಿ ಭಗವಾನ ಶ್ರೀ ಪಾರ್ಶ್ವನಾಥ ಸ್ವಾಮಿ, ಜಗನ್ಮಾತೆ ಶ್ರೀ ಪದ್ಮಾವತಿ ದೇವಿ ಸನ್ನಿಧಿಯಲ್ಲಿ ಲಕ್ಷದೀಪೋತ್ಸವದ ಬಳಿಕ ಭೂಮಿಗೆ ಅಮೂಲ್ಯ ಜಲನಿಧಿಯಾಗಿ ಆರಾಧಿಸಲ್ಪಡುವ ಕುಮುದ್ವತಿ ತೀರ್ಥದಲ್ಲಿ ಕಾರ್ತೀಕ ಲಕ್ಷದೀಪೋತ್ಸವ ನಿಮಿತ್ತ ದಿನಾಂಕ 11-12-2024ರ ಬುಧವಾರದಂದು ನಡೆದ ಧಾರ್ಮಿಕ ಪ್ರವಚನದಲ್ಲಿ **"ಅತ್ಯಾಧುನಿಕ ತಂತ್ರಜ್ಞಾನದ ಬಳಕೆಯಿಂದ ಜೀವನ ನಿರ್ವಹಣೆ ಸುಲಲಿತ. ಆದರೆ ನಮ್ಮ ಪೂರ್ವಜರು ಆರಾಧಿಸುವ ಪುಣ್ಯಪವಿತ್ರ ಸಾನಿಧ್ಯದ ಇತಿಹಾಸ ಅರಿತು, ಪರಂಪರೆ ಉಳಿಸುವ ಮೂಲಕ ಆಧ್ಯಾತ್ಮಿಕ ಸ್ಪರ್ಶದಿಂದ ಶಾರೀರಿಕ-ಮಾನಸಿಕ ಆರೋಗ್ಯ ವರ್ಧಿಸುತ್ತದೆ. ಧಾರ್ಮಿಕ ಪ್ರಜ್ಞೆ ಬೆಳೆದು ಪ್ರೀತಿ ವಾತ್ಸಲ್ಯದ ಅನ್ಯೋನ್ಯ ಸಂಬಂಧಗಳು ಸಮಾಜದ ಒಳಿತಿಗಾಗಿ ಸೇವೆ ಸಲ್ಲಿಸುವಂತೆ ಪ್ರೇರಣೆ ನೀಡುತ್ತದೆ ಎಂದು ವಿವರಿಸುತ್ತಾ ಕಾರ್ತೀಕ ಮಾಸದಲ್ಲಿ ದೀಪಾರಾಧನೆಯ ಸಂಸ್ಕೃತಿಯು ಸ್ಥಾನಿಕ ಅಭಿವೃದ್ಧಿ, ರಕ್ಷಣೆಗಾಗಿ ಸಂದೇಶ ನೀಡುತ್ತಿದ್ದು, ಪ್ರತಿಯೋರ್ವರ ಸದ್ಭಾವನೆಯ ಜೀವನ ಯಶಸ್ವಿಯಾಗಲಿ"** ಎಂದು ಆಶೀರ್ವಚನ ನೀಡಿದರು.

ಊರ ಸಮಸ್ತರು, ಪರವೂರ ಭಕ್ತರು ವೈಶಿಷ್ಟಪೂರ್ಣ ದೀಪಾರಾಧನೆಯ ವರ್ಣರಂಜಿತ ದೃಶ್ಯಗಳಿಂದ ಮಂತ್ರಮುಗ್ಧರಾದರು. ಶ್ರೀಮಠದ ಕುಂದಕುಂದ ವಿದ್ಯಾಪೀಠದ ವಿದ್ಯಾರ್ಥಿಗಳು, ಹುಂಚ-ಬಿಲ್ಲೇಶ್ವರ ಸುತ್ತಮುತ್ತಲಿನ ಗ್ರಾಮದ ನಾಗರೀಕರು ಲಕ್ಷದೀಪೋತ್ಸವದ ದೃಶ್ಯಾವಳಿಯಿಂದ ಪುನೀತರಾದರು.

## ಗುರುದೇವ ಪತ್ರಿಕೆಗೆ ಚಂದಾದಾರರಾಗಿರಿ

### ಅಮೃತ ಮಹೋತ್ಸವಕ್ಕೆ ಮೇಘಾಲಯ ರಾಜ್ಯಪಾಲ ಸಿ.ಎಚ್. ವಿಜಯಕುಮಾರ್‌ರಿಂದ ಚಾಲನೆ

## ಭಗವಾನ್ ಬಾಹುಬಲಿಯ 75ನೇ ಮಹಾಮಸ್ತಕಾಭಿಷೇಕ



**ಹುಣಸೂರು:** ತಾಲ್ಲೂಕಿನ ಬೆಟ್ಟಂದೂರು ಗ್ರಾಮದ ಶ್ರೀಕ್ಷೇತ್ರ ಗೊಮ್ಮಟಗಿರಿ ಭಗವಾನ್ ಬಾಹುಬಲಿ ಸ್ವಾಮಿಯ 75ನೇ ಮಹಾಮಸ್ತಕಾಭಿಷೇಕ, ಅಮೃತ ಮಹೋತ್ಸವ ಹಾಗೂ ಜಾತ್ರಾ ಮಹೋತ್ಸವವು ದಿನಾಂಕ 12-12-2024 ರಿಂದ 15-12-2024ರವರೆಗೆ ವಿಜೃಂಭಣೆಯಿಂದ ನೆರವೇರಿತು.

16 ಅಡಿ ಎತ್ತರದ ಬಾಹುಬಲಿ ಮೂರ್ತಿಗೆ ಜಲಾಭಿಷೇಕದಿಂದ ಆರಂಭವಾಗಿ ಎಳನೀರು, ಕಬ್ಬಿನ ಹಾಲು, ಅರಿಶಿನ, ಕ್ಷೀರ, ಕಂಕಚೂರ್ಣ, ಅರಳು, ಸಕ್ಕರೆಪುಡಿ, ಅಕ್ಕಿಹಿಟ್ಟು, ಶ್ರೀಗಂಧ ಸೇರಿದಂತೆ ವಿವಿಧ ಬಗೆಯ ಅಭಿಷೇಕಗಳು ನೆರವೇರಿದವು.

ಪ್ರತಿ ಅಭಿಷೇಕಗಳನ್ನು ಕಣ್ತುಂಬಿಕೊಂಡ ಭಕ್ತರು ವಿರಾಟ್ ಯೋಗಿ ಬಾಹುಬಲಿ ಮಹಾರಾಜ್ ಕೀ ಜೈ ಎನ್ನುತ್ತಾ ಜಯಘೋಷಗಳನ್ನು ಮೊಳಗಿಸಿದರು. ರಾಜ್ಯದ ವಿವಿಧ ಕಡೆಗಳಿಂದ ಆಗಮಿಸಿದ್ದ ಸಹಸ್ರಾರು ಜನರು ಮಸ್ತಕಾಭಿಷೇಕವನ್ನು ಕಣ್ತುಂಬಿಕೊಂಡರು.

**ಜೈನ ಧರ್ಮ ಮಾನವೀಯ ಮೌಲ್ಯಗಳನ್ನು ಬಿತ್ತಿದೆ:**

ಶ್ರೀಕ್ಷೇತ್ರ ಗೊಮ್ಮಟಗಿರಿ ಭಗವಾನ ಬಾಹುಬಲಿ ಸ್ವಾಮಿಯ 75ನೇ ಮಹಾಮಸ್ತಕಾಭಿಷೇಕ ಅಮೃತ ಮಹೋತ್ಸವ ಹಾಗೂ ಜಾತ್ರಾ ಮಹೋತ್ಸವವನ್ನು ಮೇಘಾಲಯ ರಾಜ್ಯಪಾಲ ಸಿ.ಎಚ್. ವಿಜಯ ಶಂಕರ್ ಉದ್ಘಾಟಿಸಿ ಮಾತನಾಡಿ, ಜೈನ ಧರ್ಮ ಜಗತ್ತಿನ ಎಲ್ಲ ಜೀವರಾಶಿಗಳಲ್ಲೂ ಮಾನವೀಯ ಮೌಲ್ಯಗಳನ್ನು ಬಿತ್ತಿದೆ. ಭಗವಾನ್ ಬಾಹುಬಲಿ ತ್ಯಾಗ, ಅಹಿಂಸೆಯ ಪ್ರತೀಕ, ಶಾಂತಿಯ ಪ್ರತಿಬಿಂಬ. ಸಮಾಜದಲ್ಲಿ ಎಷ್ಟೇ ಜಾತಿ, ಧರ್ಮಗಳು ಇರಬಹುದು. ಅವೆಲ್ಲಕ್ಕಿಂತಲೂ ಮಿಗಿಲಾಗಿ ನಾವೆಲ್ಲಾ ಮನುಕುಲಕ್ಕೆ ಸೇರಿದವರು ಎಂಬ ಮನೋಭಾವ ಬೆಳೆಸಿಕೊಳ್ಳಬೇಕು ಎಂದರು.

**ಅಹಿಂಸೆಯಿಂದ ಮಾತ್ರ ಮನುಕುಲದಲ್ಲಿ ಸುಖಶಾಂತಿ:**

WWW.HOMBUJAPADMAVATI.ORG

ಶ್ರೀಕ್ಷೇತ್ರ ಹೊಂಬುಜ ಜೈನ ಮಠದ ಪರಮಪೂಜ್ಯ ಜಗದ್ಗುರು ಸ್ವಸ್ತಿಶ್ರೀ ಡಾ. ದೇವೇಂದ್ರಕೀರ್ತಿ ಭಟ್ಟಾರಕ ಮಹಾಸ್ವಾಮಿಜಿ ಮಾತನಾಡಿ, ನಡೆ ಮತ್ತು ನುಡಿ ಒಂದಕ್ಕೊಂದು ಪೂರಕವಾಗಿದ್ದರೆ ಮಾತ್ರ ಮನುಷ್ಯರಾಗಲು ಸಾಧ್ಯ. ಅಹಿಂಸೆಯಿಂದ ಮಾತ್ರ ಮನುಕುಲದಲ್ಲಿ ಸುಖ-ಶಾಂತಿ ನೆಲೆಸಲಿದೆ. 'ತ್ಯಾಗದಿಂದ ಶಾಂತಿ, ಮೈತ್ರಿಯಿಂದ ಪ್ರಗತಿ, ಧ್ಯಾನದಿಂದ ಸಿದ್ಧಿ' ಎಂಬ ಬಾಹುಬಲಿ ಸಂದೇಶವನ್ನು ಬದುಕಿನಲ್ಲಿ ಅಳವಡಿಸಿಕೊಂಡಲ್ಲಿ ಬಾಹುಬಲಿಗೆ ನಿಜವಾದ ಗೌರವ ಸಲ್ಲಿಸಿದಂತಾಗುತ್ತದೆ ಎಂದರು.

**ಜಗತ್ತಿಗೆ ಶಾಂತಿ ಸಂದೇಶ ಸಾರಬಹುದು:**

ಸ್ಮರಣ ಸಂಚಿಕೆ ಬಿಡುಗಡೆಗೊಳಿಸಿದ ಸುತ್ತೂರು ಶ್ರೀ ಶಿವರಾತ್ರಿ ದೇಶಿಕೇಂದ್ರ ಸ್ವಾಮೀಜಿ ಮಾತನಾಡಿ, ಗೊಮ್ಮಟಗಿರಿ ಮೈಸೂರಿಗೆ ನಿಸರ್ಗದತ್ತ ರಮಣೀಯವಾದ ಪ್ರೇಕ್ಷಣೀಯ ಸ್ಥಳವಾಗಿದೆ. ಪ್ರಕೃತಿಯ ಮಧ್ಯೆ ನೆಲೆಸಿರುವ ಬಾಹುಬಲಿಗೆ ಮಹಾಮಸ್ತಕಾಭಿಷೇಕ ನಡೆಯುತ್ತಿರುವುದು ವಿಶೇಷ. ಈ ಕಲ್ಯಾಣ ಕಾರ್ಯಕ್ರಮದಿಂದ ಜಗತ್ತಿಗೆ ಶಾಂತಿ ಸಂದೇಶ ಸಾರಬಹುದಾಗಿದೆ. ಪ್ರೀತಿ ಹಾಗೂ ಸಹಬಾಳ್ವೆ ಅವಶ್ಯಕವಾಗಿದ್ದು, ಅಹಿಂಸೆ, ಸ್ವಾರ್ಥಗಳನ್ನು ಬಿಟ್ಟು ಬದುಕಬೇಕಿದೆ ಎಂದರು.

**ಬಾಹುಬಲಿ ಸಂದೇಶ ತ್ಯಾಗ, ಶಾಂತಿ, ಅಹಿಂಸೆ ಇಂದು ವಿಶ್ವಕ್ಕೆ ಅಗತ್ಯವಿದೆ:**

ಶ್ರವಣಬೆಳಗೊಳ ಶ್ರೀಕ್ಷೇತ್ರದ ಪರಮಪೂಜ್ಯ ಜಗದ್ಗುರು ಸ್ವಸ್ತಿಶ್ರೀ ಚಾರುಕೀರ್ತಿ ಪಂಡಿತಾಚಾರ್ಯವರ್ಯ ಭಟ್ಟಾರಕ ಮಹಾಸ್ವಾಮೀಜಿ ಆಶೀರ್ವಚನ ನೀಡಿ, ಶ್ರವಣಬೆಳಗೊಳ ಹಾಗೂ ಮೈಸೂರಿನ ನಡುವೆ ಅವಿನಾಭಾವ ಸಂಬಂಧವಿದೆ. ಬಾಹುಬಲಿ ಸಂದೇಶವನ್ನು ತ್ಯಾಗ, ಶಾಂತಿ, ಅಹಿಂಸೆ, ಪ್ರಗತಿ ಇಂದು ವಿಶ್ವಕ್ಕೆ ಅಗತ್ಯವಿದೆ ಎಂದರು.

**ಜೈನ ಧರ್ಮಕ್ಕೆ ಪ್ರಚಾರ ಅಗತ್ಯ:**

ಭಾರತೀಯ ಧಾರ್ಮಿಕ ಪರಂಪರೆಯಲ್ಲಿ ಪುರಾತನವಾದ ಜೈನ ಧರ್ಮ ಅಹಿಂಸೆ, ಶಾಂತಿ ಹೊಂದಿದ ಧರ್ಮವಾಗಿದ್ದು, ಅಹಿಂಸಾ ಧರ್ಮವಾಗಿರುವ ಜೈನ ಧರ್ಮಕ್ಕೆ ಪ್ರಚಾರ ಅಗತ್ಯ ಎಂದು ಭಾರತೀಯ ಜೈನ್‌ಮಿಲನ್ ರಾಷ್ಟ್ರೀಯ ಕಾರ್ಯಾಧ್ಯಕ್ಷರಾದ ಧರ್ಮಸ್ಥಳ ಸುರೇಂದ್ರ ಕುಮಾರ್ ತಿಳಿಸಿದರು.

ವಿಧಾನಪರಿಷತ್ ಮಾಜಿ ಸದಸ್ಯ ಗೋ. ಮಧುಸೂದನ್ ಮಾತನಾಡಿ, ಭರತನಿಂದ ಈ ದೇಶ ಭಾರತ ಖಂಡವಾಗಿದೆ. ಈತನಿಂದ ಭಾರತ ಎಂಬ ಹೆಸರು ಬಂದಿದೆ. ಈ ದೇಶದ ಹೆಸರಿನಲ್ಲಿ ಜೈನ ಧರ್ಮ ಮೂಲ ಸಿದ್ಧಾಂತ ಅಡಗಿದೆ ಎಂದರು.

ಕಾರ್ಯಕ್ರಮದಲ್ಲಿ ಕಂಬದಹಳ್ಳಿ ಜೈನಮಠದ ಪರಮಪೂಜ್ಯ ಸ್ವಸ್ತಿಶ್ರೀ ಭಾನುಕೀರ್ತಿ ಭಟ್ಟಾರಕ ಮಹಾಸ್ವಾಮೀಜಿ, ಕನಕಗಿರಿ ಶ್ರೀಕ್ಷೇತ್ರದ ಪರಮಪೂಜ್ಯ ಸ್ವಸ್ತಿಶ್ರೀ ಭುವನಕೀರ್ತಿ ಭಟ್ಟಾರಕ ಮಹಾಸ್ವಾಮೀಜಿ ಸಾನಿಧ್ಯ ವಹಿಸಿದ್ದರು.

ಬಿ.ಜೆ.ಪಿ. ಜಿಲ್ಲಾಧ್ಯಕ್ಷ ಎಲ್.ಆರ್. ಮಹದೇವಸ್ವಾಮಿ, ಹಳೇಬೀಡು ಗ್ರಾಪಂ ಅಧ್ಯಕ್ಷೆ ಎಸ್. ಶ್ರುತಿ, ಗೊಮ್ಮಟಗಿರಿ ಸೇವಾ ಸಮಿತಿ ಅಧ್ಯಕ್ಷ ಮನ್ಮಥ್‌ರಾಜ್, ಸೇವಾ ಸಮಿತಿ ಸದಸ್ಯ ಜೆ.ಎಸ್. ಸಂತೋಷ್ ಕುಮಾರ್ ಮೊದಲಾದವರು ಇದ್ದರು. ಮೈಸೂರಿನ ಉದ್ಯಮಿ ವಿನೋದ್ ಬಾಕ್ಲಿವಾಲ ಶ್ರೀ ಗೋಮ್ಮಟಗಿರಿ ಬೆಟ್ಟಕ್ಕೆ ಪ್ರವೇಶ ದ್ವಾರ ಗೋಪುರ ನಿರ್ಮಿಸಿ ಕೊಟ್ಟಿದ್ದಾರೆ. ಪದ್ಮಶ್ರೀ ಮಹಿಳಾ ಸಮಾಜದ ಉಪಾಧ್ಯಕ್ಷರಾದ ಡಾ. ಪದ್ಮಶ್ರೀ ಧನ್ಯಕುಮಾರ್ ಸಾಂಸ್ಕೃತಿಕ ಕಾರ್ಯಕ್ರಮ ನಡೆಸಿಕೊಟ್ಟರು. ನಿರ್ಮಲ ಪ್ರಾರ್ಥಿಸಿದರು. ಸ್ನೇಹ ಶ್ರೀ ಸ್ವಾಗತಿಸಿದರು. ಕುಮುದಾ ನಾಗಭೂಷಣ್ ಕಾರ್ಯಕ್ರಮ ನಿರೂಪಿಸಿ, ವಂದಿಸಿದರು.

### ಬಸ್ತವಾಡದಲ್ಲಿ ನಡೆದ ಜೈನ ಸಮಾವೇಶ

## "ಜೈನ ಸಮುದಾಯದ ಬೇಡಿಕೆಗಳ ಈಡೇರಿಕೆಗೆ ಕ್ರಮ"

– ಡಿ.ಕೆ. ಶಿವಕುಮಾರ




ಬೆಳಗಾವಿ: ಜೈನ ಸಮಾಜದ ಬೇಡಿಕೆಗಳ ಈಡೇರಿಕೆಗೆ ಸರಕಾರದ ವತಿಯಿಂದ ಎಲ್ಲ ಕ್ರಮ ಕೈಗೊಳ್ಳಲಾಗುವುದು ಎಂದು ಉಪ ಮುಖ್ಯಮಂತ್ರಿ ಹಾಗೂ ಬೃಹತ್ ನೀರಾವರಿ ಸಚಿವ ಡಿ.ಕೆ. ಶಿವಕುಮಾರ ಅವರು ಬೆಳಗಾವಿ ತಾಲೂಕಿನ ಬಸ್ತವಾಡ ಗ್ರಾಮದಲ್ಲಿ ಆಚಾರ್ಯ ಶ್ರೀ ಗುಣಧರನಂದಿ ಮುನಿಮಹಾರಾಜರ ಮುಂದಾಳತ್ವದಲ್ಲಿ ಜೈನ ಸಮಾಜದ ವಿವಿಧ ಬೇಡಿಕೆಗಳ ಈಡೇರಿಕೆಗಾಗಿ ಆಗ್ರಹಿಸಿ ನಡೆಸಲಾದ ಜೈನ ಸಮಾವೇಶದಲ್ಲಿ ಸಮಾಜದ ವತಿಯಿಂದ ಮನವಿ ಸ್ವೀಕರಿಸಿ ಮಾತನಾಡಿದರು.

ಎಲ್ಲ ಧರ್ಮಗಳು ಶ್ರೇಷ್ಠವಾಗಿವೆ. ಅದರಲ್ಲೂ ಮಾನವ ಧರ್ಮ ಅತೀ ಶ್ರೇಷ್ಠವಾಗಿದೆ. ಈ ಸರಕಾರದಲ್ಲಿ ಡಿ.ಕೆ. ಶಿವಕುಮಾರ ಇದ್ದಾನೆ. ನನ್ನ ಮೇಲೆ ಭರವಸೆ ಇಡಿ. ನಮ್ಮ ಕಾಂಗ್ರೆಸ್ ಸರಕಾರ ಜೈನ ಸಮುದಾಯಕ್ಕೆ ಅಲ್ಪ ಸಂಖ್ಯಾತರ ಸ್ಥಾನ ಮಾನ ನೀಡಿದೆ. ಅದರಂತೆ ಈಗ ನೀಡಿದ ಮನವಿ ಪತ್ರದಲ್ಲಿ ತಿಳಿಸಿದ ಹಾಗೆ ಜೈನ ಸಮುದಾಯದ ಎಲ್ಲ ಬೇಡಿಕೆಗಳ ಈಡೇರಿಕೆಗೆ ಕ್ರಮ ಕೈಗೊಳ್ಳಲಾಗುವುದು ಎಂದರು.

ಆಚಾರ್ಯ ಶ್ರೀ ಗುಣಧರನಂದಿ ಮಹಾರಾಜರು ಸಮಾರಂಭದಲ್ಲಿ ಸಾನಿಧ್ಯ ವಹಿಸಿ ಮಾತನಾಡಿ, ನಮ್ಮ ಬೇಡಿಕೆಗಳು ಈಡೇರಲೇಬೇಕು. ಜೈನ ಶಿಕ್ಷಣ ಸಂಸ್ಥೆಗಳಲ್ಲಿ ಮೊಟ್ಟೆಯನ್ನು ಕೊಡಲೇಬಾರದು. ನಮ್ಮ ಧರ್ಮ ಪರಿಪಾಲನೆ ಮಾಡಲು ಅನುಕೂಲ ಮಾಡಿಕೊಡಿ. ಜೈನ ಅಭಿವೃದ್ಧಿ ನಿಗಮ ಮಂಡಲ ಸ್ಥಾಪನೆಯಾಗಬೇಕು ಎಂದು ಆಗ್ರಹಿಸಿದರು.

ಸಮಾರಂಭದಲ್ಲಿ ಜಿಲ್ಲಾ ಉಸ್ತುವಾರಿ ಸಚಿವ ಸತೀಶ ಜಾರಕಿಹೊಳಿ ಮಾತನಾಡಿ, ಜೈನ ಸಮಾಜದಲ್ಲಿ ಅನೇಕ ಸಮಸ್ಯೆಗಳಿವೆ. ಪ್ರಸ್ತುತ ಜೈನ ಸಮಾಜದ ಬೇಡಿಕೆಗಳನ್ನು ಈಡೇರಿಸಲು ಸರಕಾರ ಬದ್ಧವಾಗಿದೆ. ಬಹುದಿನಗಳ ಬೇಡಿಕೆಯನ್ನು ಈಡೇರಿಸಿ ಶಾಶ್ವತ ಪರಿಹಾರ ಕಂಡುಕೊಳ್ಳಲು ಪ್ರಾಮಾಣಿಕ ಪ್ರಯತ್ನ ಮಾಡಲಾಗುವುದು ಎಂದರು.

ಮಹಿಳಾ ಮತ್ತು ಮಕ್ಕಳ ಕಲ್ಯಾಣ ಇಲಾಖೆಯ ಸಚಿವೆ ಲಕ್ಷ್ಮೀ ಹೆಬ್ಬಾಳಕರ ಮಾತನಾಡಿ, ಜೈನ ಸಮಾಜದ ಬೇಡಿಕೆಗಳ ಬಗ್ಗೆ ಮುಖ್ಯಮಂತ್ರಿಗಳು, ಉಪ ಮುಖ್ಯಮಂತ್ರಿಗಳ ಹಾಗೂ ಸಚಿವರೊಂದಿಗೆ ಚರ್ಚೆ ಮಾಡಿ ಎಲ್ಲ ಬೇಡಿಕೆಗಳ ಈಡೇರಿಕೆಗೆ ಕ್ರಮ ಕೈಗೊಳ್ಳಲಾಗುವುದು ಎಂದು ಹೇಳಿದರು. ಸಮಾರಂಭದಲ್ಲಿ ಬಿಜೆಪಿ ರಾಜ್ಯಾಧ್ಯಕ್ಷ ಬಿ.ವೈ. ವಿಜೇಯಂದ್ರ ಮಾತನಾಡಿ, ವಿಧಾನಸಭಾ ಅಧಿವೇಶನದಲ್ಲಿ ಜೈನ ಸಮಾಜದ ಬೇಡಿಕೆಗಳ ಬಗ್ಗೆ ಸರಕಾರದ ಗಮನ ಸೆಳೆಯುತ್ತೇನೆ ಎಂದು ಹೇಳಿದರು. ಶಾಸಕ ಪ್ರಕಾಶ ಹುಕ್ಕೇರಿ ಮಾತನಾಡಿ, ಚಿಕ್ಕೋಡಿ ಮತಕ್ಷೇತ್ರದಲ್ಲಿ ಈಗಾಗಲೇ ಪ್ರತ್ಯೇಕ ವಸತಿ ನಿಲಯಗಳನ್ನು ಮಂಜೂರು ಮಾಡಲಾಗಿದ್ದು, ಶೀಘ್ರದಲ್ಲೇ ಶಿಲಾನ್ಯಾಸ ಮಾಡಲಾಗುವುದು ಎಂದು ಹೇಳಿದ ಅವರು ಉಳಿದ ಬೇಡಿಕೆಗಳ ಬಗ್ಗೆ ಗಮನ ಸೆಳೆಯಲಾಗುವುದು ಎಂದು ಹೇಳಿದರು. ಶಾಸಕ ಅಭಯ ಪಾಟೀಲ, ರಾಜು ಸೇಠ, ಬಾಬಾಸಾಹೇಬ ಪಾಟೀಲ, ಸಚಿವ ಡಿ.ಸುಧಾಕರ, ಮಾಜಿ ಶಾಸಕ ಸಂಜಯ ಪಾಟೀಲ, ಮಾಜಿ ಶಾಸಕ ವೀರಕುಮಾರ ಪಾಟೀಲ, ಶಾಸಕ ಸಿದ್ದು ಸವದಿ, ವಿಧಾನ ಪರಿಷತ ಸದಸ್ಯ ಚನ್ನಿರಾಜ ಹಟ್ಟಿಹೊಳಿ, ನ್ಯಾಯವಾದಿ ರವಿರಾಜ ಪಾಟೀಲ, ಜೈನ ಸಮಾಜದ ಮುಖಂಡ ಉತ್ತಮ ಪಾಟೀಲ ಮೊದಲಾದವರು ಮಾತನಾಡಿದರು.

ಜೈನ ಸಮಾಜದ ಮುಖಂಡರಾದ ವಿನೋದ ದೊಡ್ಡಣ್ಣವರ, ಸುನೀಲ ಹನಮಣ್ಣವರ, ವಿವಿಧ ಸಂಘ ಸಂಸ್ಥೆಗಳ ಪದಾಧಿಕಾರಿಗಳು ಸೇರಿದಂತೆ ಮೊದಲಾದವರು ಉಪಸ್ಥಿತರಿದ್ದರು.

ಸಮಾರಂಭದಲ್ಲಿ ಮೂಡಬಿದರೆ ಜೈನ ಮಠದ ಪರಮಪೂಜ್ಯ ಸ್ವಸ್ತಿಶ್ರೀ ಚಾರುಕೀರ್ತಿ ಪಂಡಿತಾಚಾರ್ಯವರ್ಯ ಭಟ್ಟಾರಕ ಮಹಾಸ್ವಾಮೀಜಿ, ಹೊಂಬುಜ ಜೈನ ಮಠದ ಪರಮಪೂಜ್ಯ ಜಗದ್ಗುರು ಸ್ವಸ್ತಿಶ್ರೀ ಡಾ. ದೇವೇಂದ್ರಕೀರ್ತಿ ಭಟ್ಟಾರಕ ಮಹಾಸ್ವಾಮೀಜಿ, ಸೋಂದಾ ಜೈನ ಮಠದ ಪರಮಪೂಜ್ಯ ಸ್ವಸ್ತಿಶ್ರೀ ಅಕಲಂಕಕೇಸರಿ ಭಟ್ಟಾಕಲಂಕ ಭಟ್ಟಾರಕ ಮಹಾಸ್ವಾಮೀಜಿ, ಕೊಲ್ಲಾಪೂರ ಜೈನ ಮಠದ ಪರಮಪೂಜ್ಯ ಸ್ವಸ್ತಿಶ್ರೀ ಲಕ್ಷ್ಮೀಸೇನ ಭಟ್ಟಾರಕ ಮಹಾಸ್ವಾಮೀಜಿ, ನಾಂದನಿ ಜೈನ ಮಠದ ಪರಮಪೂಜ್ಯ ಸ್ವಸ್ತಿಶ್ರೀ ಜಿನಸೇನ ಭಟ್ಟಾರಕ ಮಹಾಸ್ವಾಮಿಜಿಗಳವರು ಉಪಸ್ಥಿತರಿದ್ದು ಮಾತನಾಡಿದರು.

### ಪಿಎಚ್.ಡಿ ಪದವಿ ಪ್ರಧಾನ



ಜಮಖಂಡಿ : ಇಲ್ಲಿಯ ಶ್ರೀ ಅಜಯಕುಮಾರ ಮೋತಿಚಂದ ರಂಗೋಳಿ ಇವರಿಗೆ ಕರ್ನಾಟಕ ವಿಶ್ವವಿದ್ಯಾಲಯ ಧಾರವಾಡ ಸಂಖ್ಯಾಶಾಸ್ತ್ರ ವಿಷಯದಲ್ಲಿ ಪಿಎಚ್.ಡಿ ಪದವಿಯನ್ನು ಪ್ರಧಾನ ಮಾಡಿದೆ. ಅವರು 'ಸಮ್ ಸ್ಟಡೀಜ್ ಆಫ್ ಕಾಂಪಿಟಿಂಗ್ ರಿಸ್ಕ್ಸ್ ಮಾಡೆಲ್ ಆ್ಯಂಡ್ ದೇಯರ್ ಅಪ್ಲಿಕೇಶನ್' ಎಂಬ ವಿಷಯದ ಮೇಲೆ ಹಿರಿಯ ಪ್ರಾಧ್ಯಾಪಕ ಡಾ. ಎ.ಎಸ್. ತಳವಾರ ಅವರ ಮಾರ್ಗದರ್ಶನದಲ್ಲಿ ಸಂಶೋಧನಾ ಮಹಾಪ್ರಬಂಧವನ್ನು ಕ.ವಿ.ವಿ.ಗೆ ಸಲ್ಲಿಸಿದ್ದರು.

# ಶ್ರೀಕ್ಷೇತ್ರ ಹೊಂಬುಜದಲ್ಲಿ ದೀಪೋತ್ಸವ


ಅಧೀನ ಕ್ಷೇತ್ರ ವರಂಗದಲ್ಲಿ ದೀಪೋತ್ಸವ


ತ್ರಿಕೂಟ ಜಿನಮಂದಿರದಲ್ಲಿ ದೀಪೋತ್ಸವ


ಮಕ್ಕಳ ಬಸದಿಯಲ್ಲಿ ದೀಪೋತ್ಸವ


ಬೋಗಾರ ಬಸದಿಯಲ್ಲಿ ದೀಪೋತ್ಸವ

## ನೂತನ ಮಾನಸ್ತಂಭ ಹಾಗೂ ಚತುರ್ಮುಖ ಜಿನಬಿಂಬ ಮತ್ತು ಧಾಮಸಂಪ್ರೋಕ್ಷಣ ಹಾಗೂ ಪಂಚಕಲ್ಯಾಣ ಪ್ರತಿಷ್ಠಾ ಹಾಗೂ ವೇದಿ ಪ್ರತಿಷ್ಠಾ ಮಹಾಮಹೋತ್ಸವ

WWW.HOMBUJAPADMAVATI.ORG

## “ಪ್ರಾಚೀನ ಸ್ಮಾರಕಗಳನ್ನು ಸಂರಕ್ಷಿಸಿ”

–ಪರಮಪೂಜ್ಯ ಸ್ವಸ್ತಿಶ್ರೀ ಡಾ. ದೇವೇಂದ್ರಕೀರ್ತಿ ಭಟ್ಟಾರಕ ಮಹಾಸ್ವಾಮೀಜಿ

**ಹರಸೂರು :** ನಮ್ಮ ಪ್ರಾಚೀನ ಇತಿಹಾಸ ಮತ್ತು ಪರಂಪರೆ ಸಾರುವ ಬಸದಿ, ಶಿಲಾ ಶಾಸನಗಳು, ಕೋಟೆ ಕೊತ್ತಲೆಗಳನ್ನು ಸಂರಕ್ಷಣೆ ಮಾಡುವುದು ಮತ್ತು ಅವುಗಳನ್ನು ಮೂಲ ಆಶಯಕ್ಕೆ ಧಕ್ಕೆ ಬಾರದ ಹಾಗೆ ವರ್ತಮಾನದ ಪೀಳಿಗೆಗೆ ತಿಳಿಸುವ ಕಾರ್ಯವಾಗಬೇಕಾಗಿದೆ ಎಂದು ಹೊಂಬುಜ ಜೈನ ಮಠದ ಪರಮಪೂಜ್ಯ ಜಗದ್ಗುರು ಸ್ವಸ್ತಿಶ್ರೀ ಡಾ. ದೇವೇಂದ್ರಕೀರ್ತಿ ಭಟ್ಟಾರಕ ಮಹಾಸ್ವಾಮಿಜಿಯವರು ಹೇಳಿದರು.

ಅತಿಶಯ ಕ್ಷೇತ್ರವಾದ ಹರಸೂರು ಗ್ರಾಮದಲ್ಲಿ ಡಿ. 06 ರಿಂದ 08ರವರೆಗೆ ಶ್ರೀ 1008 ಭಗವಾನ ವಿಘ್ನಹರ ಪಾರ್ಶ್ವನಾಥ ತೀರ್ಥಂಕರ ಮಂದಿರದ ನೂತನ ಮಾನಸ್ಥಂಬ ಪಂಚಕಲ್ಯಾಣ ಪ್ರತಿಷ್ಠಾ ಮಹೋತ್ಸವದ ರಾಜ್ಯಾಭಿಷೇಕ ಸಮಾರಂಭದ ದಿವ್ಯ ನೇತೃತ್ವ ವಹಿಸಿ ಆಶೀರ್ವಚನ ನೀಡಿದರು. ಹೊಸ ದೇಗುಲ, ಮಂದಿರಗಳನ್ನು ನಿರ್ಮಿಸುವ ಬದಲು ಕಾಲದ ಕೈಯಲ್ಲಿ ಸಿಲುಕಿ ಶಿಥಿಲಾವಸ್ಥೆಯಲ್ಲಿರುವ ಮತ್ತು ಭವ್ಯವಾದ ಕಲೆ, ಸಾಹಿತ್ಯ, ಸಂಗೀತ ಸಾರುವ ಬಸದಿಗಳು, ಶಿಲಾ ಮಂಟಪಗಳು, ಶಾಸನಗಳು ಸಂರಕ್ಷಿಸಿ ಜೀರ್ಣೋದ್ಧಾರ ಮಾಡುವುದು ಬಹು ದೊಡ್ಡ



ಕಾರ್ಯವಾಗಿದ್ದು, ಈ ದಿಸೆಯಲ್ಲಿ ಸಮಾಜ ಚಿಂತಿಸುವಂತೆ ಆಶಯ ವ್ಯಕ್ತಪಡಿಸಿದರು.

ಪಂಚಕಲ್ಯಾಣ ಪ್ರತಿಷ್ಠಾ ಮಹೋತ್ಸವದ ದಿವ್ಯ ಸಾನಿಧ್ಯವನ್ನು ಪರಮಪೂಜ್ಯ 108 ಶ್ರೀ ಸೌಮ್ಯಸಾಗರ ಮುನಿಮಹಾರಾಜರು, ಪರಮಪೂಜ್ಯ ಶ್ರೀ 108 ಕಲ್ಯಾಣಸಾಗರ ಮುನಿಮಹಾರಾಜರು, ಪರಮಪೂಜ್ಯ ಶ್ರೀ 108 ವಿಭಸ್ವರಸಾಗರ ಮುನಿಮಹಾರಾಜರು, ಪರಮಪೂಜ್ಯ ಶ್ರೀ 108 ಸಾರಸ್ವತಸಾಗರ ಮುನಿಮಹಾರಾಜರು ಮತ್ತು ಪರಮಪೂಜ್ಯ ಶ್ರೀ 108 ಶುದ್ಧೋಪಯೋಗ ಸಾಗರ ಮುನಿಮಹಾರಾಜರು ಹಾಗೂ ಪರಮಪೂಜ್ಯ ಶ್ರೀ 108 ಜಯಂತಸಾಗರ ಮುನಿ ಮಹಾರಾಜರು ವಹಿಸಿದ್ದರು.

ಸೋಂದ ಜೈನ ಮಠದ ಪರಮಪೂಜ್ಯ ಸ್ವಸ್ತಿಶ್ರೀ ಅಕಲಂಕಕೇಸರಿ ಭಟ್ಟಾಕಲಂಕ ಭಟ್ಟಾರಕ ಮಹಾಸ್ವಾಮೀಜಿಯವರು ಉಪಸ್ಥಿತರಿದ್ದರು.

ಜಿಲ್ಲೆಯೂ ಸೇರಿದಂತೆ ಆಂದ್ರ, ಮಹಾರಾಷ್ಟ್ರ, ತೆಲಂಗಾಣ ರಾಜ್ಯಗಳಿಂದ ಸಾವಿರಾರು ಶ್ರಾವಕ-ಶ್ರಾವಕಿಯರು ಹಾಗೂ ಹರಸೂರು ಸೇರಿದಂತೆ ಸುತ್ತ-ಮುತ್ತಲಿನ ಗ್ರಾಮಗಳ ಭಕ್ತಾದಿಗಳು ಭಾಗವಹಿಸಿದ್ದರು.

ಗುರುದೇವ
GURUDEVA MONTHLY
RNI No. 13248/57-POSTEL REGD No. KA/SK/SMG 198/2024-26
Date of Posting 17th of every month. Sub Post office, Humcha - 577436
ವಾರ್ಷಿಕ ಚಂದಾ : ರೂಪ್ಯಾ 150-00 ಮತ್ತು ಆಜೀವ ಸದಸ್ಯತ್ವಕ್ಕೆ : ರೂಪ್ಯಾ 1000-00 ಮಾತ್ರ
ವ್ಯವಸ್ಥಾಪಕರು, "ಗುರುದೇವ" ಕಾರ್ಯಾಲಯ, ಅಂಚೆ : ಹೊಂಬುಜ, ಶಿವಮೊಗ್ಗ-ಜಿಲ್ಲೆ, ಕರ್ನಾಟಕ-೫೭೭೪೩೬

Edited, Published & Printed by Sri C.D. Ashok Kumar, on behalf of Swasthishree Devendrakeerthi Bhattaraka Pattacharyavarya Swamiji, Sri Hombuja Jain Math
Printed at Sri Mahaveer Printing Press, J.P.N. Road, Durgigudi, Shimoga (Ph: 08182- 222044) and Published at Gurudeva Karyalaya Sri Hombuja Jain Math
Post: Humcha, Tq. Hosanagar., Dist. Shimoga-577436 Ph : 08185-262722